ವಿಫಲ ತೆರೆದ ಬಾವಿಗಳ ಮೇಲಿನ ಬ್ಯಾಂಕ್ ಸಾಲಗಳನ್ನು ಮನ್ನಾ ಮಾಡುವುದು

225 (555) ಶ್ರೀ ಮಾಧುಸ್ವಾಮಿ ಜಿ.ಸಿ. (ಚಿಕ್ಕನಾಯಕನಹಳ್ಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರೈತರ ವಿಫಲ ತೆರೆದ ಬಾವಿಗಳ ಮೇಲಿನ ಬ್ಯಾಂಕ್ ಸಾಲಗಳನ್ನು ಮನ್ನಾ ಮಾಡುವ ಸರ್ಕಾರದ ಯೋಜನೆಯು ಸರ್ಕಾರದ ಗಮನದಲ್ಲಿದೆಯೇ;

ಆ) ಇಂತಹ ಯೋಜನೆಯ ಅನುಷ್ಠಾನಗೊಳಿಸುವ ಕಾಲದಲ್ಲಿ ಅಧಿಕಾರಿಗಳ ನಿರ್ಲಕ್ಷದಿಂದ ಅನೇಕ ರೈತರಿಗೆ ಇದುವರೆವಿಗೂ ಸಾಲ ಮನ್ನಾ ಆಗದಿರುವುದು ಸಹ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದರೆ, ಸರ್ಕಾರ ಮತ್ತೊಮ್ಮೆ ಈ ಯೋಜನೆಯನ್ನು ವಿಸ್ತರಿಸಿ, ಇರುವ ವಿಫಲತೆಗಳ ಬಾವಿಗಳ ಸಾಲ ಮನ್ನಾ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿ)

ಅ) ಹೌದು.

ಆ) ಅಂತಹ ಯಾವುದೇ ನಿರ್ದಿಷ್ಟ ಪ್ರಕರಣಗಳು ವರದಿಯಾಗಿರುವುದಿಲ್ಲ.

ಇ) ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿಸಿ/234/ಸಿಎಲ್‌ಎಸ್/83, ಬೆಂಗಳೂರು, ದಿನಾಂಕ 30–6–1984ರನ್ವಯ ವಿಫಲಬಾವಿ ಯೋಜನೆಯನ್ನು, ಅನುಷ್ಠಾನಗೊಳಿಸಿದ್ದು, ಈ ಯೋಜನೆಯು ಈಗಲೂ ಜಾರಿಯಲ್ಲಿರುತ್ತದೆ ಮತ್ತು ಜಿಲ್ಲಾಧಿಕಾರಿಗಳು ಅರ್ಹ ಪ್ರಕರಣಗಳಲ್ಲಿ ಈಗಲೂ ಸಹ ವಿಫಲಬಾವಿ ಸಹಾಯಧನ ಮಂಜೂರಾತಿಯನ್ನು ನೀಡುತ್ತಿದ್ದಾರೆ.

ಸರ್ಕಾರವು ರಾಜ್ಯದಲ್ಲಿ ಕಳೆದ ಸತತ 3 ವರ್ಷಗಳ ಬರಗಾಲದ ಪ್ರಯುಕ್ತ 2003–04ನೇ ಸಾಲಿನಲ್ಲಿ ರೈತರಿಗೆ ವಿಶೇಷ ಪ್ಯಾಕೇಜ್ ಘೋಷಿಸಿದ್ದು ಅದರಂತೆ ವಿಫಲ ತೆರೆದ ಬಾವಿ ಪರಿಹಾರಧನ ಯೋಜನೆಯಡಿಯಲ್ಲಿ ಬಾಕಿ ಉಳಿದ ಪ್ರಕರಣಗಳ ಸಾಲ ಮತ್ತು ಬಡ್ಡಿ ಹಣವನ್ನು ಮನ್ನಾ ಮಾಡಲು ರೂ. 22.00 ಕೋಟಿಯನ್ನು ಮಂಜೂರು ಮಾಡಿ ದಿನಾಂಕ 15–9–2003 ರಂದು ಆದೇಶ ಹೊರಡಿಸಿರುತ್ತದೆ. ಜಿಲ್ಲಾಧಿಕಾರಿಗಳ ವಿಫಲಬಾವಿ ಪರಿಹಾರಧನ ಮಂಜೂರಾತಿ ಆದೇಶಗಳನ್ವಯ ಯೋಜನೇತರ ಆಯವ್ಯಯ ಅವಕಾಶದಂತೆ ಹಣ ಬಿಡುಗಡೆ ಮಾಡಲಾಗುತ್ತಿದೆ.

ಆದ್ದರಿಂದ ಸರ್ಕಾರವು ಈ ಯೋಜನೆ ಅನುಷ್ಠಾನದ ಬಗ್ಗೆ ಕ್ರಮ ಕೈಗೊಂಡಿರುತ್ತದೆ.

ವಿತ್ತೀಯ ಕೊರತೆ

226 (581) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಕೂಬ (ಬಸವ ಕಲ್ಯಾಣ) ಮಾನ್ಯ ಉಪ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ಕಳೆದ 3 ವರ್ಷಗಳಿಂದ ಇಲ್ಲಿಯವರೆವಿಗೆ ಅಂದರೆ ದಿನಾಂಕ 31–3–2004 ಅಂತ್ಯದ ವೇಳೆಗೆ ಪ್ರತಿ ವರ್ಷ ಎದುರಿಸಿದ ವಿತ್ತೀಯ ಕೊರತೆಯ ಮೊತ್ತವೆಷ್ಟು;

ಆ) ಸರ್ಕಾರವು ಇದೇ ಅವಧಿಯಲ್ಲಿ ಯಾವ ಯಾವ ಸಂಸ್ಥೆಗಳಿಂದ ಯಾವ ಯಾವ ಬಾಬ್ತುಗಳಿಗಾಗಿ ಎಷ್ಟೆಷ್ಟು ಮೊತ್ತದ ಸಾಲವನ್ನು / ಓವರ್ ಡ್ರಾಫ್ಟ್‌ನ್ನು ಪಡೆದುಕೊಂಡಿರುತ್ತದೆ;

ಇ) ಸರ್ಕಾರವು ಅನುಭವಿಸುತ್ತಿರುವ ವಿತ್ತೀಯ ಕೊರತೆಯನ್ನು ಸರಿತೂಗಿಸಲು ಪಡೆದ ಸಾಲ ಹಾಗೂ ಓವರ್ ಡ್ರಾಫ್ಟ್‌ಗಳನ್ನು ಚುಕ್ತಾ ಮಾಡಲು ಯಾವ ಕ್ರಮಗಳನ್ನು ಅನುಸರಿಸುತ್ತದೆ;